ಸಿ.ಸಿ .ನಂ.212/2022 ಪಿಡಬ್ಲೂಃ 1

ದಿನಾಂಕಃ 13-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**

3. ಆರೋಪಿ ನನಗೆ 9 ವರ್ಷಗಳಿಂದ ಪರಿಚಯ. ಆರೊಪಿ ನನಗೆ ರಾಜಕೀಯ ಪಕ್ಷದಿಂದ ಪರಿಚಯ. ಬ್ಯಾಂಕಿನ ಮ್ಯಾನೇಜರ್ ತನ್ನ ಮಗನಿಗೂ ಸಾಲ ಕೊಡುವುದಾದರೂ ಅಥವಾ ಯಾವುದೇ ಪರಿಚಯಸ್ಥರಿಗೆ ಸಾಲ ಕೊಡುವುದಾದರೂ ರೂಲ್ಸ ಹಾಗೂ ರೆಗ್ಯೂಲೇಶನ್ ಫೋಲೋ ಮಾಡಬೇಕು ಎಂದರೆ ಗೊತ್ತಿಲ್ಲ. ನನಗೆ ಬ್ಯಾಂಕಿನಲ್ಲಿ ವ್ಯವಹಾರ ಮಾಡಿ ಗೊತ್ತಿದೆ. ನಾನು ಕೆಲವೊಂದು ಕರಾರುಗಳನ್ನು ಹಾಗೂ ಅವರು ಕೇಳಿದ ದಾಖಲಾತಿಗಳನ್ನು ಪೂರೈಸಿ ಸಾಲವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ . ಆರೋಪಿಯ ಮನೆ ಬೆಳಂಬಾರದಲ್ಲಿ ಇದೆ. ಅವರ ಮನೆಯ ಶಾಲೆಯ ಪಕ್ಕದಲ್ಲಿ ಇದೆ. ಆರೋಪಿ ಮನೆ ಶಾಲೆಯ ಪಕ್ಕದಲ್ಲಿ ಇಲ್ಲವೇ ಇಲ್ಲ ಎಂದರೆ ಸಾಕ್ಷಿ ಅವರ ಮನೆಗೆ ಹೋಗಬೇಕಾದರೆ ಶಾಲೆಯ ರೋಡ್ ನಿಂದ ಹೋಗಬೇಕು ಎಂದು ನುಡಿದಿರುತ್ತಾರೆ. ಅವರ ಮನೆಗೆ ಹೋಗಬೇಕಾದರೆ ಶಾಲೆಯ ರೋಡ್ ನಿಂದ ಹೋಗಬೇಕು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಆರೋಪಿ ಪರಿಚಯ ಇಲ್ಲ ಹಾಗೂ ಆರೋಪಿ ನನ್ನೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ . ಯಾವ ಕಾರಣಕ್ಕಾಗಿ ಹಣವನ್ನು ಕೊಟ್ಟೆ ಎಂಬುದನ್ನು ನನ್ನ ನೋಟಿಸನಲ್ಲಾಗಲಿ , ಫಿರ್ಯಾದಿನಲ್ಲಾಗಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ . ಅವರ ವ್ಯವಹಾರಕ್ಕಾಗಿ ಹಣವನ್ನು ಕೇಳಿದ್ದರು ಹಣ ಕೊಟ್ಟಿದ್ದೇನೆ. ನಾವು ಸರ್ಕಾರದ ಆದೇಶದಂತೆ ನಡೆಯಬೇಕಾಗುತ್ತದೆ ಎಂದರೆ ಸರಿ . ಅದೇ ರೀತಿ ಸರ್ಕಾರದ ಆದೇಶದಂತೆ 20 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ನಮೂಲಕ ಹಾಗೂ ಚೆಕ್ ಮತ್ತು ನೆಟ್ಟ ಮೂಲಕ ವರ್ಗಾಯಿಸಬೇಕು ಎಂದರೆ ಸರಿ . ಆ ಸಮಯದಲ್ಲಿ ಆರೋಪಿ ಹಾಗೂ ನನ್ನ ನಡುವೆ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸರಿ . ಯಾವುದೇ ದ್ವೇಷ ಇಲ್ಲದ್ದರಿಂದ ಆರೋಪಿಯ ಜೊತೆ

ಕರಾರು ಮಾಡಿಕೊಳ್ಳಲು ಯಾವುದೇ ರೀತಿಯ ತೊಂದರೆ ಇಲ್ಲಾಗಿತ್ತು ಎಂದರೆ ಸಾಕ್ಷಿ ವಿಶ್ವಾಸದ ಮೇರೆಗೆ ಕೊಟ್ಟಿದ್ದೆನು ಎಂದು ನುಡಿದಿರುತ್ತಾರೆ. ನಾನು ಅಗತ್ಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಡದೇಇದ್ದರೆ ಅದನ್ನು ಇಲ್ ಲೀಗಲ್ ಎಂದು ಪರಿಗಣಿಸಬೇಕಾಗುತ್ತದೆ ಎಂದರೆ ಸಾಕ್ಷಿ ಚೆಕ್ ನ್ನು ಹಾಜರು ಪಡಿಸಿದ್ದೇನೆ ಎಂದು ನುಡಿದಿರುತ್ತಾರೆ . ವಿಶ್ವಾಸದ ಬಗ್ಗೆ ದಾಖಲಾತಿ ಕೊಡಲು ಆಗುವುದಿಲ್ಲ . ಈ ವ್ಯವಹಾರದ ಪೂರ್ವದಲ್ಲಿ ಅಥವಾ ಈ ವ್ಯವಹಾರದ ನಂತರ ಇಲ್ಲಿಯವರೆಗೆ ಆರೋಪಿ ಬೇರೆ ಯಾವುದೇ ಪ್ರಕರಣದಲ್ಲಿ ಆತನ ವಿರುದ್ಧ ಚೆಕ್ ಬೋನ್ಸ ಆಗಿದೆ ಅಥವಾ ಅವನು ಮೋಸಮಾಡುವ ವ್ಯಕ್ತಿ ಎಂದು ಹೇಳುವ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಪಡಿಸಲು ಆಗುತ್ತದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಾನು ಸಿಸಿ ನಂ. 648/2024 ಗಂಗಾಧರ ಎನ್ನುವವರ ವಿರುದ್ಧ ಚೆಕ್ ಬೋನ್ಸ ಕೇಸು ದಾಖಲಿಸಿದ್ದೇನೆ ಎಂದರೆ ಸರಿ . ಅದೇ ರೀತಿ ಸಿಸಿ ನಂ. 567/2025 ಚೆಕ್ ಬೋನ್ಸ ಕೇಸು ದಾಖಲಿಸಿದ್ದೇನೆ ಎಂದರೆ ಸಾಕ್ಷಿ ಹೆಸರು ಹೇಳಿದರೆ ಗೊತ್ತಾಗುತ್ತದೆ ನಂಬರ ಹೇಳಿದರೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ . ಸಿಸಿ ನಂ. 65/2022 ಗುರು ಖಾರ್ವಿ ಯವರ ವಿರುದ್ಧ ಕೇಸು ದಾಖಲಿಸಿದ್ದೇನೆ ಎಂದರೆ ಸರಿ . ಅದೇ ರೀತಿ ಅಂಕೋಲಾ ಹಾಗೂ ಬೇರೆ ನ್ಯಾಯಾಲಯಗಳಲ್ಲಿ ಚೆಕ್ ಬೋನ್ಸ ಕೇಸುಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಆದಾಯ ತೆರಿಗೆ ಪಾವತಿಸುತ್ತಿದ್ದೇನೆ ಎಂದರೆ ಸರಿ . ಆದಾಯ ತೆರಿಗೆ ಪಾವತಿಸಬೆಕಾದರೆ ಯಾವುದೇ ಮುಚ್ಚು ಮರೆ ಇಲ್ಲದೇ ಆದಾಯವನ್ನು ತೋರಿಸಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣದ ಆರೋಪಿಯ ಜೊತೆಗಿನ ವ್ಯವಹಾರದ ಬಗ್ಗೆ ಇಷ್ಟು ಅಮೌಂಟ್ ಬರಬೇಕೆಂದು ಕಾಣಿಸಿದ್ದೇನೆ ಎಂದು ನುಡಿದಿರುತ್ತಾರೆ . ಯಾರ ವಿರುದ್ಧ ಎಂದು ತೋರಿಸಿಲ್ಲ ಇಷ್ಟು ಅಮೌಂಟ್ ಬರಬೇಕೆಂದು ತೋರಿಸಿದ್ದೇನೆ . ಈ ಆರೋಪಿಯ ವಿರುದ್ಧ ಯಾವುದೇ ವ್ಯವಹಾರ ಇಲ್ಲದ ಕಾರಣ ನನಗೆ ಅದನ್ನು ನಮೂದಿಸಲು ಆಗಿಲ್ಲ ಎಂದರೆ ಸರಿಯಲ್ಲ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

ಪಿಡಬ್ಲ್ಯೂಃ 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.